ಸರೀನಾ..?' ಎಂದು ಹಗುರವಾಗಿ ನುಡಿದು ಎದ್ದು ಹೋದ.

ಆತನ ಮಾತುಗಳಿಂದ ಅಪೂರ್ವಾಳ ಮನಸ್ಸು ನಿರಾಳವಾಯಿತು. ಅವಳ ಇರುಸು ಮುರುಸು ದೂರವಾಗಿತ್ತು. ಮತ್ತೆರಡು ದಿನಗಳು ಸರಿದು ಹೋದ ಬಳಿಕ ಒಂದು ಸಂಜೆ, ರಾಯರು ವಿಜಯಮ್ಮನೊಡನೆ ಭೇಟಿ ನೀಡಿದರು. ಅವರನ್ನು ಕಂಡೊಡನೆ ಅಪೂರ್ವಾಳ ತಹಬದಿಗೆ ಬಂದಿದ್ದ ಮನಸ್ಥಿತಿ ಮತ್ತೆ ಕದಡಿತು.

'ಅಪೂರ್ವ.. ನಮ್ಗೆ ನಿಮ್ಜೊತೆ ಮಾತನಾಡ್ಬೇಕಾಗಿದೆ..' ಎಂದರು ವಿಜಯಮ್ಮ.

'ಆದ್ರೆ.. ನನ್ಗೆ ನಿಮ್ಜೊತೆ ಯಾವ ಮಾತೂ ಬೇಡ' ಅಪೂರ್ವಾಳ ದನಿ ಬಿರುಸಾಗಿತ್ತು.

'ಹಾಗೆನ್ನಬೇಡ್ವೇ.. ನಿನ್ನ ಸಿಟ್ಟು, ಬೇಸರ ನಮ್ಗೆ ಅರ್ಥವಾಗುತ್ತೆ.. ಆದ್ರೆ.. ದಯವಿಟ್ಟು ನನ್ಮಾತು ಕೇಳು..' ವಿಜಯಮ್ಮ ಆರ್ತವಾಗಿ ನುಡಿದಾಗ ಅಪೂರ್ವಾಳಿಗೆ ಅವರ ಮಾತುಗಳನ್ನು ತಳ್ಳಿ ಹಾಕಲಾಗಲಿಲ್ಲ. ವಿದ್ಯಾ ಮತ್ತು ಶ್ರೀಧರ ರಾವ್ ಅವರನ್ನು ಮಾತನಾಡಲು ಏಕಾಂತ ಕಲ್ಪಿಸಿ ಒಳ ನಡೆದರು.

'ನೀನು ಈಚೆ ಬಂದ್ಮೇಲೆ ಸೂರ್ಯ ಮತ್ತೆ ಮಂಕಾಗಿ ಕೋಣೆ ಸೇರಿಕೊಂಡಿದ್ದಾನೆ. ಅವ್ನನ್ನು ಸಂಭಾಳಿಸಲು ನಮ್ಮಿಂದ ಆಗ್ತಾ ಇಲ್ಲ.. ನಿನ್ನನ್ನು ತುಂಬಾ ಹಚ್ಕೊಂಡು ಬಿಟ್ಟಿದ್ನಲ್ವಾ. ನೀನು ಬಿಟ್ಟು ಬಂದಿದ್ದು ಅವನಿಗೆ ಸಹಿಸಲು ಸಾಧ್ಯವಾಗ್ತಾ ಇಲ್ಲ..'

'ಅದಕ್ಕೇ ನಾನೇನು ಮಾಡ್ಲಿ... ಅವ್ರೇನು ಎಳೇ ಮಗುನಾ.. ಅವ್ರಿಗೆ ಹೇಗೆ ಮನಸ್ಸು ಎಂಬುದು ಇದೆಯೋ ನನ್ಗೂ ಹಾಗೇ ಇದೆಯಲ್ವಾ..? ನನ್ಗೂ ನನ್ನದೇ ಆದ ಭಾವನೆಗಳು.. ನೋವು ದುಃಖಗಳಿರುತ್ತಲ್ವಾ...? ಅದಕ್ಕೆ ಬೆಲೆ ಇಲ್ವಾ...?' ಅಪೂರ್ವ ಖಾರವಾಗಿ ಪ್ರಶ್ನಿಸಿದಳು.

'ನಿಮ್ಮ ಮಗ ಮಂಕಾಗಿರುವುದು ನಿಮ್ಗೆ ಕಳವಳ ತರಿಸುತ್ತೆ.. ನನ್ನ ನೋವಿಗೆ ನಿಮ್ಮಲ್ಲಿ ಬೆಲೆ ಇಲ್ವಾ..?'

'ಅಪೂರ್ವ ನಿನ್ನಂದೆ ಸಾವಿಗೆ ಸೂರ್ಯ ಕಾರಣನಾದರೂ, ಅದೊಂದು ಆಕಸ್ಮಿಕ, ದುರದೃಷ್ಟವಶಾತ್ ಆದ ಘಟನೆ.. ಅದಕ್ಕೆ ಅವ್ನು ಶಿಕ್ಷೆನೂ ಅನುಭವಿಸಿದ್ದಾನೆ... ಸೂರ್ಯನಿಗೆ ಆ ವ್ಯಕ್ತಿ ನಿನ್ನ ತಂದೆ ಅಂತ ತಿಳಿದಾಗಲಿಂದ ಇನ್ನಷ್ಟು ಕುಗ್ಗಿ ಹೋಗಿದ್ದಾನೆ.. ಅವ್ನಿಗೆ ತನ್ನ ಕೃತ್ಯದ ಬಗ್ಗೆ ಪಶ್ಚಾತ್ತಾಪ ಇದೆ.. ಅದು ನಿನ್ಗೂ ಗೊತ್ತು.. ಜೀವನದಲ್ಲಿ ತುಂಬಾ ನೊಂದು ಬೆಂದು ಹೋಗಿರುವ ನನ್ಮಗನ ಜೀವನದಲ್ಲಿ ಬೆಳಕಾಗಿ ಬಂದವಳು ನೀನು. ಅವ್ನಿಂದ ದೂರವಾಗಿ ಮತ್ತೆ ಅವನನ್ನು ಅದೇ ಕೂಪಕ್ಕೆ ತಳ್ಳಬೇಡ...ನಿನ್ನ ಕೈ ಮುಗಿದು ಕೇಳ್ಕೊತೀನಿ.. ಎಲ್ಲಾ ಮರೆತು ದೊಡ್ಡ ಮನಸ್ಸು ಮಾಡಿ ವಾಪಸ್ಸು ಬಂದ್ಬಿಡು ಅಪೂರ್ವ..' ವಿಜಯಮ್ಮ ದೀನರಾಗಿ ಕೇಳಿಕೊಂಡರು.

ಅಪೂರ್ವ ಭಾವರಹಿತಳಾಗಿ ನಿಂತೇ ಇದ್ದಳು. ಅವರ ಯಾವ ಅನುನಯದ ಮಾತುಗಳು ಕೂಡಾ ಅವಳ ಹೃದಯದ ಗಾಯವನ್ನು ಮಾಗಿಸಲು ಶಕ್ತವಾಗಲಿಲ್ಲ. ತಮ್ಮ ಮಾತುಗಳು ಅವಳ ಮೇಲೆ ಯಾವ ಪರಿಣಾಮವೂ ಬೀರಲಿಲ್ಲ ಎಂದು ಅರಿವಾದ ಬಳಿಕ ವಿಜಯಮ್ಮ ಅಸಹಾಯಕರಂತೆ ಪತಿಯ ಕಡೆಗೆ ದಿಟ್ಟಿಸಿದರು. ಈಗ ಸಂಧಾನದ ಪ್ರಯತ್ನವನ್ನು ರಾಯರು ನಡೆಸುವ ಸಲುವಾಗಿ ಎದ್ದು ನಿಂತರು.

'ನೀನು ತುಂಬಾ ವಿವೇಚನೆ ಉಳ್ಳವಳು. ನಿನ್ಗೆ ಎಲ್ಲಾ ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ. ಈ ಘಟನೆ ಜರುಗಿದಾಗ ನೀನಿನ್ನೂ ತುಂಬಾ ಚಿಕ್ಕವಳು. ಕರುಣಾಕರನಿಗೆ ಮಗಳಿದ್ದಾಳೆ ಅಂತ ತಿಳಿದಾಗ, ನಿನ್ನ ಗತಿ ಏನು ಎಂಬ ಚಿಂತೆ ನಮ್ಗೆ ಕಾಡಿತ್ತು.. ನಾವು ನಿನ್ನನ್ನು ನಮ್ಜೊತೆ ಕರೆ ತಂದು ಇಟ್ಟುಕೊಳ್ಳಲು, ಸೂರ್ಯನನ್ನು ಜೈಲಿಗೆ ಕಳಿಸಿದ್ದ ನಮ್ಮ ಮನಸ್ಥಿತಿ ಸರಿ ಇರಲಿಲ್ಲ...ನೀನೂ ಚಿಕ್ಕಮ್ಮನಿಗೆ ತುಂಬಾ ಹೊಂದಿಕೊಂಡಿದ್ದರಿಂದ ಅವರ ಜವಾಬ್ದಾರಿಗೆ ಬಿಟ್ಟೆವು. ನಮ್ಮ ಮಗನಿಂದ ನಿನ್ನ ಬಾಳು ಹಾಗಾಯ್ತು ಅನ್ನುವ ನೋವು ನಿನ್ನ ಮುಖ ನೋಡಿದಾಗಲೆಲ್ಲಾ ನಮ್ಗೆ ಕಾಡುತ್ತೆ... ಪಾಪ ಪ್ರಜ್ಞೆ ಕಾಡುತ್ತೆ ನಿಜ.. ಆದ್ರೆ ಅದಕ್ಕೂ ಮೀರಿದ ಮಮತೆ, ವಾತ್ಸಲ್ಯ ಖಂಡಿತಾ ಇದೆ ಅಪೂರ್ವ. ಅದು ನಿನಗೂ ಗೊತ್ತು.. ನಾವೆಲ್ಲಾ ಸೂರ್ಯನ ಬಗ್ಗೆ ನಂಬಿಕೆ ಕಳಕೊಂಡು ಕೈ ಬಿಟ್ಟಾಗ, ಅವ್ನಿಗೆ ಆಸರೆಯಾದವಳು ನೀನು.. ಅವನನ್ನು ಸರಿದಾರಿಗೆ ತಂದವ್ಳು ನೀನು. ಈಗ ನೀನೇ ಅವನ ಕೈ ಬಿಡ್ತೀಯಾ? ನೀನು ಅವ್ನನ್ನು ಪ್ರೀತಿಸಿದ್ದು ಸುಳ್ಳಾ ಹಾಗಾದ್ರೆ..? ಈ ಸಂಗತಿ ಈಗ ನಿನ್ಮುಂದೆ ಬಂದಿರೋದ್ರಿಂದ ನಿನ್ಗೆ ಆಘಾತವಾಗಿದೆ. ಚೇತರಿಸಿಕೊಳ್ಳಲು ಸಮಯ ಬೇಕು ನಿಜ.. ಆದ್ರೆ ಅದಕ್ಕಾಗಿ ಸಂಬಂಧಗಳನ್ನು ಕಡಿದು ಬರಬೇಡಮ್ಮಾ.. ನಿನ್ನ ಮನಸ್ಸು ತಿಳಿಯಾಗುವ ತನಕ ನೀನಿಲ್ಲೇ ಇದ್ದು ನಂತರ ಬಾ.. ನಾವೆಲ್ಲಾ ನಿನಗೋಸ್ಕರ ಕಾಯ್ತಾ ಇರ್ತೀವಿ...ಸರೀನಾ..?'.

ಅದಕ್ಕೂ ಅಪೂರ್ವ ಮಾತನಾಡಲಿಲ್ಲ. ಯಾವ ಪ್ರತಿಕ್ರಿಯೆಯೂ ನೀಡಲಾರದಂತೆ ಮನಸ್ಸು ಜಡ್ಡುಗಟ್ಟಿ ಹೋಗಿತ್ತು. ಅಪೂರ್ವ ತಮ್ಮೊಂದಿಗೆ ಮಾತನಾಡಿಸುವ ಯಾವ ಉತ್ಸಾಹವೂ ತೋರದಾಗ, ರಾಯರು ಮತ್ತು ವಿಜಯಮ್ಮ ಕುಗ್ಗಿ ಹೋದರು. ವಿದ್ಯಾ ಮತ್ತು ಆಕೆಯ ಪತಿಯೊಡನೆ ಔಪಚಾರಿಕವಾಗಿ ಮಾತನಾಡಿ ಹೊರಟು ನಿಂತರು. ವಿದ್ಯಾ ಅಥವಾ ಆದರ್ಶ ಅವರು ಬಂದ ಕಾರಣವನ್ನು ಅಪೂರ್ವಾಳೊಡನೆ ಕೆದಕಿ ಕೇಳಲು ಹೋಗಲಿಲ್ಲ. ಅಪೂರ್ವಾಳ ಮನಸ್ಸು ಮಾತ್ರ ಕದಡಿ ಹೋಗಿತ್ತು.

'ಅವರು ಹೇಳಿದಷ್ಟು ಸುಲಭವಾಗಿ ಎಲ್ಲವನ್ನೂ ಮರೆಯಲು ಮನ್ನಿಸಲು ಸಾಧ್ಯವೇ? ತನ್ನನ್ನು ಸಾಕಿದ್ದು, ಬೆಳೆಸಿದ್ದು, ಓದಿಸಿದ್ದೆಲ್ಲಾ ತಮ್ಮ ತಪ್ಪಿನ ಪ್ರಮಾಣ ಕಡಿಮೆಗೊಳಿಸಲು ಎಂದೇ ತೋರುತ್ತದೆ. ಆ ಪ್ರೀತಿ, ಅಂತಃಕರಣದ ಹಿಂದೆ ಇಂಥ ಒಂದು ಕಾರಣವಿತ್ತೆಂದು ಅರಿವಾದ ಬಳಿಕವೂ ಅವರೆಲ್ಲರ ಬಗ್ಗೆ ಅದೇ ಹಳೆಯ ಪ್ರೀತಿ ಉಳಿಯಲು ಸಾಧ್ಯವೇ? ಆ ಗೌರವ ಮತ್ತೆ ಬರಲು ಸಾಧ್ಯವೇ? ಸೂರ್ಯನಿಂದ ಇಂಥ ಅನಾಹುತವಾಗದೇ ಇದ್ದಿದ್ದರೆ, ತನ್ನಂಥ ಹುಡುಗಿಯನ್ನು ತಂದು ಸಾಕಿ, ಬೆಳೆಸಿ, ಓದಿಸುತ್ತಿದ್ದರೆ? ಇಲ್ಲ.. ಖಂಡಿತ ಇಲ್ಲ.. ಅಂದ ಬಳಿಕ ಇದೆಲ್ಲಾ ಮಾಡಿದ್ದು ತಮ್ಮ ಪಾಪದ ಮೂಟೆ ಹಗುರಗೊಳಿಸುವ ಸಲುವಾಗಿ ಅಷ್ಟೇ..! ಇನ್ನು ಸೂರ್ಯನಿಗೆ ತನ್ನ ಹೃದಯ ಕೊಟ್ಟಿದ್ದೇನೋ ನಿಜ.. ಆತನಿಗೆ ಒತ್ತಾಸೆಯಾಗಿ ನಿಂತದ್ದೇನೋ ನಿಜ.. ಆದರೆ ಅದೇ ವ್ಯಕ್ತಿ, ತನ್ನ ತಲೆಯ ಮೇಲಿಂದ ತಂದೆಯ ನೆರಳು ಕಸಿದುಕೊಂಡಿದ್ದಾನೆಂದು ತಿಳಿದ ಬಳಿಕವೂ ಆ ಪ್ರೀತಿ ತನ್ನಲ್ಲಿ ಹಾಗೇ ಉಳಿಯಲು ಸಾಧ್ಯವೇ? ಅವನ ಮುಖ ಕಂಡಾಗಲೆಲ್ಲ, ಆತ ತನ್ನ ತಂದೆಯ

## ಇಲ್ಲಿಯವರೆಗೆ



ಆದರ್ಶ ಹಾಗೂ ಆತನ ತಾಯಿ ವಿದ್ಯಾ ರಾಯರ ಮನೆಗೆ ಬಂದು ಅಪೂರ್ವಾಳನ್ನು ಆದರ್ಶನಿಗೆ ಕೊಟ್ಟು ಮದುವೆ ಮಾಡುವಂತೆ ಪ್ರಸ್ತಾಪಿಸುತ್ತಾರೆ. ಆಗ ಸೂರ್ಯ ತಾನು ಅಪೂರ್ವಾಳನ್ನು ಮದುವೆಯಾಗುವುದಾಗಿ ಹೇಳಿದ್ದಲ್ಲದೆ ಪರಸ್ಪರ ಒಪ್ಪಿಕೊಂಡಿದ್ದೇವೆ ಎಂದೂ ಹೇಳಿ ಅಚ್ಚರಿ ಮೂಡಿಸುತ್ತಾನೆ. ಇದರಿಂದ ವಸುಮತಿ, ಶಂಕರನಿಗೆ ಬೇಸರವಾದರೆ ವಿಜಯಮ್ಮ ಹಿಗ್ಗುತ್ತಾಳೆ. ಆದರೆ ಕೊನೆಗೆ ಅಪೂರ್ವಾಳಿಗೆ ತನ್ನ ತಂದೆಯನ್ನು ಕೊಲೆ ಮಾಡಿದ್ದು ಸೂರ್ಯ ಎಂದೇ ತಿಳಿಯುತ್ತದೆ. ಈ ಕಟು ಸತ್ಯ ತಿಳಿದ ಅಪೂರ್ವಾಳ ಮನಸ್ಸು ಅಲ್ಲೋಲಕಲ್ಲೋಲವಾಗುತ್ತದೆ. ಮನೆಯಲ್ಲಿ ಬಿಗುವಾದ ವಾತಾವರಣ ಸೃಷ್ಟಿಯಾಗುತ್ತದೆ.